ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ
ಚನ್ನರಾಯಪಟ್ಟಣ

**ಸಿ.ಸಿ.ಃ 37/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ಮಣಿಕಂಠ | C.W – 1 |
| **ತಂದೆಯ ಹೆಸರು** | ಃ | ಗೋವಿಂದೇಗೌಡ | P.W – 1 |
| **ವಯಸ್ಸು** | ಃ | 37 ವರ್ಷ | |
| **ಉದ್ಯೋಗ** | ಃ | ಎಳನೀರು ವ್ಯಾಪಾರ | **ಪ್ರಮಾಣ ವಚನ ಬೋಧಿಸಲಾಯಿತು** |
| **ವಾಸ** | ಃ | ಬೆಲಸಿಂದ | **ದಿನಾಂಕಃ** 19-08-2019 |

---

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಅಮಾನತ್ತು ಮಹಜರ್ ಆಗಿದ್ದು, ಅಮಾನತ್ತು ಮಹಜರ್ ನ್ನು ನಿಪಿ-1 ಎಂದು, ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಸುಮಾರು 2-3 ವರ್ಷಗಳ ಹಿಂದೆ ನಿಪಿ-1 ಕ್ಕೆ ಚನ್ನರಾಯಪಟ್ಟಣ ನಗರ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ. ನಿಪಿ-1 ರ ಸಂಗತಿಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಮಧ್ಯದ ಬಾಟಲಿಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

ದಿಃ 20-02-2016 ರಂದು ಚನ್ನರಾಯಪಟ್ಟಣ ನಗರ ಠಾಣಾ ಪೊಲೀಸರು ನನ್ನನ್ನು ಠಾಣೆಗೆ ಕರೆದು, ಪೊಲೀಸರು ನ್ಯಾಯಾಲಯದ ಮುಂದಿರುವ ಆರೋಪಿ ಹಾಗೂ ಮಧ್ಯದ ಬಾಟಲಿಗಳನ್ನು ತೋರಿಸಿದರು ಎಂದರೆ ಸರಿಯಲ್ಲ. ಆರೋಪಿಯಿಂದ ವಶಪಡಿಸಿಕೊಂಡ 180 ಎಂ.ಎಲ್ ನ 11

ಕೊಡೇಯ್ಸ್ **XXX** ರಮ್, **180** ಎಂ.ಎಲ್ ನ **14** ಫ್ರೆಂಡ್ಸ್ ಕ್ಲಬ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡು ಬಿಳಿ ಬಟ್ಟೆಯಲ್ಲಿ ಸುತ್ತಿ **ಪಿ** ಎಂಬ ಅಕ್ಷರದಿಂದ ಸೀಲ್ ಮಾಡಿ, ರಾಸಾಯನಿಕ ಪರೀಕ್ಷೆಗಾಗಿ ತೆಗೆದರು ಎಂದರೆ ಸರಿಯಲ್ಲ. ಸದರಿ ಮಹಜರ್ ನ್ನು ಮಧ್ಯಾಹ್ನ **12-40** ರಿಂದ **02-00** ರವರೆಗೆ ಮಹಜರ್ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿದಲ್ಲಿದ್ದು ನಿಪಿ-**1** ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ದಿಃ **20-02-2016** ರಂದು ನನಗೆ ಈಗ ಓದಿ ಹೇಳಿದ ಭಾಗದಂತೆ " ದಿಃ 20-12-2016 ರಂದು ------------------------------ ನೋಡಿದರೆ ಗುರುತಿಸುತ್ತೇನೆ " ಎಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು.

ಘಟನೆಯ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಿತ ಆರೋಪಿಗೆ ಸಹಾಯ ಮಾಡುವ ದೃಷ್ಟಿಯಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು - ಇಲ್ಲ

**ಮರು ವಿಚಾರಣೆ ಃ-** ಇಲ್ಲ

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

**(ಎಸ್.ಚಿನ್ನಸ್ವಾಮಿ)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**